ಜನಜಂಗುಳಿ ದಟ್ಟೈಸಿತ್ತು. ಅಲ್ಲಿ ಪ್ರತಿ ಇಂಚಿಂಚು ಜಾಗ ಭಕ್ತರಿಂದ ಗಿಜಿಗುಡುತ್ತಿತ್ತು, ಆದರೂ ಅವರ ಕಾಲ್ದೆಸೆಯ ಮಧ್ಯೆ ತೂರಿಕೊಂಡ ಅದರಲ್ಲಿ 'ಅಮ್ಮ, ಅಪ್ಪ' ಎನ್ನುವ ಬಿಕ್ಕಳಿಕೆ ಹಾಗೇ ಉಳಿದುಕೊಂಡಿತ್ತು. ದೇವಾಲಯದ ಪ್ರವೇಶದ್ವಾರದ ಸನಿಹ, ಅಂತು, ಜನದಟ್ಟಣಿ, ವಿಪರೀತವಿದ್ದು ಒಬ್ಬರಿಗೊಬ್ಬರು ತಳ್ಳಾಡುತ್ತಿದ್ದರ. ಅಜಾನುಬಾಹು ದೈತ್ಯರು, ಆಡಂಬರದ, ಕ್ರೂರ ದೃಷ್ಟಿಯ ಕಣ್ನೋಟದವರು, ಕೆರಳುವ ಪ್ರಕೃತಿಯವರು ಪಾಪ! ಬಡಪಾಯಿ ಈ ಅಬ್ಬೆಪಾರಿ ಮಗು ಅವರ ಕಾಲುಗಳ ನಡುವೆ ನುಸುಳಿ ಹೋದರೂ, ಅವರ ನಿರ್ದಯಿ ಕೈಗಳಿಂದ ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ನೂಕಲ್ಪಟ್ಟು, ಅವರ ಕಾಲ್ತುಳಿತಕ್ಕೆ ಸಿಕ್ಕಿಹಾಕಿಕೊಳ್ಳಲಿತ್ತು ಇನ್ನೇನು, ಅದೇನಾದರೂ ತನ್ನ ಗಂಟಲ ಹುರಿ ಕಿತ್ತು ಹೋಗುವ ಹಾಗೆ 'ಅ...ಮ್ಮಾ, ಅಪ್ಪಾ' ಎಂದು ಆ ಕ್ಷಣದಲ್ಲಿ ಕಿರುಚದೆ ಹೋಗಿದ್ದರೆ! ಭಕ್ತರ ನೂಕುನುಗ್ಗಲಿನಲ್ಲಿ ಓರ್ವ ದಯಾಳು ಇದರ ಮುಲುಕನ್ನು ಕೇಳಿಸಿಕೊಂಡು ಬಹು ಪ್ರಯಾಸದಿಂದ ಕೆಳಕ್ಕೆ ಬಾಗಿ ತನ್ನ ತೋಳುಗಳಲ್ಲಿ-ಹಿಡಿದೆತ್ತಿದ ಮೇಲಕ್ಕೆ.

'ಪಾಪು, ಹೇಗೆ ಬಂದ್ಯಾಪ್ಪ ಇಲ್ಲಿಗೆ? ನಿಮ್ಮಪ್ಪ, ಅಮ್ಮ ಎಲ್ಲಿ?' ಎಂದಾತ ಕೇಳಿದ ಆ ದಟ್ಟಣೆಯಿಂದ ಬಿಡಿಸಿಕೊಂಡು ಹೊರಗೆ ಬಂದ ಮೇಲೆ. ಈಗ ಮಗು ಮತ್ತಷ್ಟು ಹಿಂದಿಗಿಂತಲೂ ಜೋರಾಗಿ 'ನನ್ನಮ್ಮ ಬೇಕು, ನನ್ನಪ್ಪ ಬೇಕು' ಎಂದು ಅಳಲು ಪ್ರಾರಂಭಿಸಿತು ಆ ವ್ಯಕ್ತಿ ಮಗುವನ್ನು ಸಮಾಧಾನಪಡಿಸಲೆಂದು ಎತ್ತಿಕೊಂಡು ಸುತ್ತಾಡಿಸಲು ಪ್ರಯತ್ನಿಸಿದ. 'ಕುದುರೆ ಸವಾರಿ ಮಾಡುವೆಯಾ ಕಂದ?' ಎಂದು ಮೆಲ್ಲಗೆ ಕೇಳಿದ. ಈಗ ಮಗುವಿನ ಗಂಟಲು ಸಾವಿರ ಕೀರಲು ಬಿಕ್ಕಳಿಕೆಗಳಾಗಿ ಹರಿಯಿತು, ಅಲ್ಲದೆ ಅದು 'ನನ್ನಮ್ಮ ಬೇಕು, ನನ್ನಪ್ಪ ಬೇಕು' ಎಂದಷ್ಟೇ ಅರಚಿತು.

ಆತ ಈಗ ಹಾವಾಡಿಗನ ಬಳಿಗೆ ಕರೆದೊಯ್ದ. ಅವನು ಇನ್ನೂ ಅಲ್ಲೇ ಇದ್ದು ತನ್ನ ಆಟ ಮುಂದುವರಿಸಿದ್ದ. 'ಪಾಪು, ಈ ಕೊಳಲು ದನಿ ಎಷ್ಟು ಇಂಪಾಗಿದೆ ಅಲ್ವಾ?' ಎಂದ.

ಅದು ಈಗ ತನ್ನೆರಡು ಕಿವಿಗಳನ್ನು ಕೈಗಳಿಂದ ಮುಚ್ಚಿಕೊಳ್ಳುತ್ತಾ ಇನ್ನೂ ದುಪ್ಪಟ್ಟು ದನಿಯಲ್ಲಿ 'ನನಗೆ ಅಮ್ಮ ಬೇಕು, ಅಪ್ಪ ಬೇಕು' ಎಂದಿತು.

ಆ ವ್ಯಕ್ತಿ ಬಳಿಕ ಬಲೂನ್ ಮಾರುವವನ ಬಳಿ ಕರೆದೊಯ್ದ ಬಲೂನ್‌ಗಳ ಬಹು ಆಕರ್ಷಣೀಯ ಬಣ್ಣ ಅದನ್ನು ಶಾಂತಗೊಳಿಸಬಹುದೆಂದು, ಅದರ ಗಮನ ಬೇರೆ ಕಡೆ ಹರಿಸಬಹುದೆಂದು ಭಾವಿಸಿ, 'ಕಾಮನಬಿಲ್ಲಿನ ಬಲೂನ್ ಬೇಕಾ ಪಾಪು?' ಎಂದು ಕೇಳಿದ ಆತ. ಹಾರಾಡುವ ಬಲೂನ್‌ಗಳ ಕಡೆ ಮುಖ ಕೂಡ ಒಡ್ಡದೆ ಪಕ್ಕಕ್ಕೆ ತಿರುಗಿ ಬಿಕ್ಕಳಿಸುತ್ತ 'ಅಮ್ಮ ಬೇಕು, ಅಪ್ಪ ಬೇಕು' ಎಂದಿತು ಅದು. ಮಗುವನ್ನು ಖುಷಿಪಡಿಸಲು ಆತ ಹೂವಾಡಿಗನಿದ್ದ ಜಾಗಕ್ಕೆ ಬಂದು 'ನೋಡು ಪಾಪು! ಎಷ್ಟು ಚೆನ್ನಾಗಿದೆ ಹೂ! ಘಮಘಮ ಅನ್ನಿದೆ ಅಲ್ವಾ, ಹಾರ ತಗೊಂಡು ಕೊರಳು ಸುತ್ತಾ ಹಾಕ್ಕೊಳ್ಳಾಣ್ವಾ?' ಎಂದು ಅಂಗಲಾಚಿದ ಆ ದಯಾಳು.



ಮಗು ಮೂಗು ಸಿಂಡರಿಸಿ ಪಕ್ಕಕ್ಕೆ ಹೊರಳಿತು, ಮತ್ತದೆ ರಾಗ 'ಅಮ್ಮ ಬೇಕು, ಅಪ್ಪ ಬೇಕು' ಅದರ ಅಸಮಾಧಾನ ತಿಳಿಗೊಳಿಸಿ ಖುಷಿಪಡಿಸಲು ಈಗ ಆತನಿಗೆ ಇದ್ದ ದಾರಿ ಎಂದರೆ ಸಿಹಿತಿಂಡಿಯ ಉಡುಗೊರೆಯೊಂದೇ. ಹೀಗಾಗಿ ಮಿಠಾಯಿ ಅಂಗಡಿಗೆ ಕರೆದೊಯ್ದು 'ಪಾಪು, ಯಾವ ಸಿಹಿ ತಿಂಡಿ ಬೇಕಪ್ಪ?' ಎಂದು ಕೇಳಿದ. ಮುಖ ಪಕ್ಕಕ್ಕೆ ಹೊರಳಿಸಿದ ಮಗು 'ಅಮ್ಮ ಬೇಕು, ಅಪ್ಪ ಬೇಕು' ಎಂದು ಬಿಕ್ಕಳಿಸಿತು ಮತ್ತೂ ಜೋರಾಗಿ.

●